# ‘ಅಧ್ಯಾತ್ಮಕ್ಕೆ ಬೇಕಿರುವುದು ಶ್ರದ್ಧೆಯಷ್ಟೇ... ಧರ್ಮ, ಭಕ್ತಿಯ ಹೆಸರಲ್ಲ



ಅಶ್ವಿನಿ ಭಿಡೆ ದೇಶಪಾಂಡೆ ಅವರದು ಭಾರತೀಯ ಸಂಗೀತ ಕ್ಷೇತ್ರದಲ್ಲಿ ಪ್ರಮುಖ ಹೆಸರು. ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಚಿಂತನಶೀಲ ಗಾಯಕಿಯಾಗಿ, ವಿದ್ವಾಂಸರಾಗಿ ಹಾಗೂ ರಚನಾಕಾರರಾಗಿ ಗುರುತಿಸಿಕೊಂಡಿರುವ ಅವರು, ಮುಂಬೈ ವಿಶ್ವವಿದ್ಯಾಲಯದಲ್ಲಿ ಬಯೋಕೆಮಿಸ್ಟ್ರಿ ಅಧ್ಯಯನ ನಡೆಸಿ, ಬಾಬಾ ಅಟೋಮಿಕ್ ರಿಸರ್ಚ್ ಸೆಂಟರ್‌ನಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಅಶ್ವಿನಿ ಭಿಡೆ ಅವರ ತಾಯಿ ಪ್ರಸಿದ್ಧ ಗಾಯಕಿ ಮಾಣಿಕ್ ಭಿಡೆ. ಅಮ್ಮನ ಗರಡಿಯಲ್ಲಿ ಮಗಳು ಖ್ಯಾಲ್ ಗಾಯನದಲ್ಲಿ ಜೈಪುರ ಅತ್ರೋಲಿ ಘರಾಣೆ ಶೈಲಿಯಲ್ಲಿ ಆಳವಾದ ಅಭ್ಯಾಸ ನಡೆಸಿದ್ದಾರೆ. ಪಂಡಿತ್ ರತ್ನಾಕರ ಪೈ ಅವರ ನಿರಂತರ ಮಾರ್ಗದರ್ಶನಕ್ಕೆ ಪಾತ್ರರಾಗಿದ್ದಾರೆ. ಅವರ ಧ್ವನಿಯಲ್ಲಿನ ವಿಶಿಷ್ಟ ಮಾಧುರ್ಯಕ್ಕೆ ಮನಸೋತ ಅಪಾರ ಅಭಿಮಾನಿ ವರ್ಗ ದೇಶದ ಉದ್ದಗಲಕ್ಕೂ, ವಿದೇಶಗಳಲ್ಲೂ ಇದೆ. ಪಂಡಿತ್ ರವಿಶಂಕರ್ ಹಾಗೂ ಕುಮಾರ್ ಗಂಧರ್ವ ಅವರ ಗಾಯನ ಶೈಲಿಯನ್ನು ಅಪಾರವಾಗಿ ಮೆಚ್ಚುವ ಅಶ್ವಿನಿ ಭಿಡೆ ಸರಳತೆಯನ್ನೇ ಆಭರಣವಾಗಿಸಿಕೊಂಡವರು. ‘ರಾಷ್ಟ್ರೀಯ ಕುಮಾರ ಗಂಧರ್ವ ಸಮ್ಮಾನ್ ಪುರಸ್ಕಾರ’ ಪಡೆದ ಮೊದಲ ಹಿಂದೂಸ್ತಾನಿ ಗಾಯಕಿ ಎನ್ನುವ ಅಗ್ಗಳಿಕೆಯ ಅವರು, ಜಗತ್ತಿನ ಪ್ರಸಿದ್ಧ ವೇದಿಕೆಗಳಲ್ಲಿ ಕಛೇರಿ ನೀಡಿದ್ದಾರೆ.

**ಕೋಡಿಬೆಟ್ಟು ರಾಜಲಕ್ಷ್ಮಿ**